ಬೆಂಗಳೂರಿನಲ್ಲಿ ಇತ್ತೀಚೆಗೆ ನಡೆದ ಅಸಂಖ್ಯ ಪ್ರಮಥರ ಗಣಮೇಳ ಯಶಸ್ವಿಯಾದ ಹಿನ್ನೆಲೆಯಲ್ಲಿ ಬೆಂಗಳೂರು ಬಸವಕೇಂದ್ರ ಹಾಗು ಸ್ವಾಗತ ಸಮಿತಿ ವತಿಯಿಂದ ಡಾ. ಶಿವಮೂರ್ತಿ ಮುರುಘಾ ಶರಣರಿಗೆ ಅಭಿನಂದನಾ ಕಾರ್ಯಕ್ರಮ ನಡೆಯಿತು.



ದಲಿತ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ಡಾ.ಎಂ. ವೆಂಕಟಸ್ವಾಮಿ ಮಾತನಾಡಿ, 12ನೇ ಶತಮಾನವನ್ನು ಜ್ಞಾಪಿಸುವ ಗಣಮೇಳವನ್ನು 21ನೇ ಶತಮಾನದಲ್ಲಿ ಶ್ರೀಗಳು ಮಾಡಿದರು. ಬಸವಣ್ಣನವರ ಆದರ್ಶಗಳನ್ನು ಅನುಕರಣೆಗೆ ತರುವುದು ಶ್ರೀಗಳಿಂದ ಮಾತ್ರ ಸಾಧ್ಯ. ಶ್ರೀಗಳ ಮಾರ್ಗದರ್ಶನದಿಂದ ಕಾರ್ಯಕ್ರಮ ಯಶಸ್ವಿಯಾಗಿ ನೆರವೇರಿತು. ಬುದ್ಧ ಅಂಬೇಡ್ಕರ್‌ರ ಆಶಯಗಳನ್ನು ಶ್ರೀಗಳು ನೆರವೇರಿಸುತ್ತಿದ್ದಾರೆ ಎಂದು ಅಭಿಪ್ರಾಯಿಸಿದರು.

ಹಿರಿಯ ಸಾಹಿತಿ ಡಾ. ಎಲ್.ಎನ್. ಮುಕುಂದರಾಜು ಮಾತನಾಡಿ, 12ನೇ ಶತಮಾನದಲ್ಲಿ ಜನರನ್ನು ಸಂಘಟಿಸುವ ಶಕ್ತಿ ಬಸವಣ್ಣನವರಿಗೆ ಮಾತ್ರ ಇತ್ತು. ಎಲ್ಲ ಸಮುದಾಯದವರನ್ನು ಕಾಯಕಕ್ಕೆ ಹಚ್ಚುವ ಆಶಯ ಅವರದಾಗಿತ್ತು. ಇಂದಿನ ದಿನಮಾನಗಳಲ್ಲಿ ಮುರುಘಾ ಶರಣರು ಸಂಘಟಿಸುವ ಕೆಲಸ ಮಾಡುತ್ತಿದ್ದಾರೆ. ನಮ್ಮ ಜ್ಞಾನ ಸಂಪತ್ತು ವಚನಗಳು. ಎಲ್ಲ ವಚನಕಾರರು ಶ್ರೇಷ್ಠ ವಚನಗಳನ್ನು ಕೊಟ್ಟಿದ್ದಾರೆ. ಹಳಕಟ್ಟಿಯವರು ವಚನಗಳನ್ನು ಸಂಗ್ರಹಿಸಿ ಕೊಟ್ಟರು. ಎಲ್ಲ ಜಾತಿಯವರಿಗೂ ಆಧ್ಯಾತ್ಮಿಕ ಶಕ್ತಿಯನ್ನು ಕೊಡಬೇಕು ಎಂದು ನಿರ್ಧರಿಸಿ ಪ್ರಯೋಗಾತ್ಮಕವಾಗಿ ಮಾಡಿದವರು ಮುರುಘಾ ಶರಣರು ಎಂದು ಹೇಳಿದರು.

ಅಭಿನಂದನೆ ಸ್ವೀಕರಿಸಿ ಮಾತನಾಡಿದ ಶ್ರೀಗಳು, ಗಣಮೇಳದಲ್ಲಿ ಭಾಗವಹಿಸಿದ ಜನರಲ್ಲಿ ಅನುಭಾವದ ಹಂಬಲ ವ್ಯಕ್ತವಾಯಿತು. ಇದಕ್ಕೆ ಎಲ್ಲರ ಸಹಕಾರ ದೊರೆತು ಯಶಸ್ವಿಯಾಯಿತು ಎಂದು ತಿಳಿಸಿದರು. ಬಿಜೆಪಿ ರಾಜ್ಯ ಯುವಮೋರ್ಚಾ ಪ್ರಧಾನಕಾರ್ಯದರ್ಶಿ ಬಿ.ವೈ. ವಿಜಯೇಂದ್ರ ಮಾತನಾಡಿ, ಗಣಮೇಳ ಒಂದು

ಐತಿಹಾಸಿಕ ಕಾರ್ಯಕ್ರಮವಾಗಿ ಮೂಡಿಬಂತು. ಮುರುಘಾ ಶರಣರು ಒಂದು ಶಕ್ತಿಯಾಗಿದ್ದಾರೆ ಎಂದು ನುಡಿದರು.

ಲಂಡನ್‌ನ ಡಾ. ನೀರಜ್ ಪಾಟೀಲ್ ಮಾತನಾಡಿ, ಬಸವಕಲ್ಯಾಣದಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಮೊದಲು ಆರಂಭಗೊಂಡಿತು. ಯುಕೆ ಅಂದರೆ ಯುನೈಟೆಡ್ ಕಿಂಗ್‌ಡಮ್ ಅಲ್ಲ ಅದು ಉತ್ತರ ಕರ್ನಾಟಕ ಎಂದರು.

ವಿಧಾನಪರಿಷತ್ ಮಾಜಿ ಸದಸ್ಯ ಈ. ಕೃಷ್ಣಪ್ಪ, ಅಸಂಖ್ಯ ಗಣಮೇಳ ಇದೊಂದು ಪ್ರಾರಂಭ. ಮುಂದೆ ಇದು ಬೃಹದಾಕಾರವಾಗಿ ಬೆಳೆಯಬೇಕು. ಇದರ ಮೂಲಕ ಸಮಾಜದ ಓರೆಕೋರೆಗಳನ್ನು ತಿದ್ದಬೇಕೆಂದರು.

ವೇದಿಕೆಯಲ್ಲಿ ರಾಮಕೃಷ್ಣ, ಶ್ರೀಮತಿ ಮಧುರ ಅಶೋಕ್‌ಕುಮಾರ್, ಹನುಮಲಿ ಷಣ್ಮುಖಪ್ಪ, ರುದ್ರೇಶ್, ಹೆಂಜಾರಪ್ಪ, ಸೋಮಯ್ಯ, ಗುರುಸ್ವಾಮಿ, ವಿಶ್ವನಾಥಯ್ಯ, ಎನ್.ಜಿ.ಶ್ರೀನಿವಾಸ್, ಗೋವಿಂದರಾಜು, ಮರಿಸ್ವಾಮಿ ಇದ್ದರು.

ತೋಟಪ್ಪ ಮತ್ತು ಸಂಗಡಿಗರು ಪ್ರಾರ್ಥನೆ ಮಾಡಿದರು. ಲಿಂಗಮೂರ್ತಿ ಸ್ವಾಗತಿಸಿದರು. ಅರುಣ್‌ಕುಮಾರ್ ನಿರೂಪಿಸಿದರು.



